**OS No. 72/2023**
**ಪಿ.ಡಬ್ಲ್ಯೂ: 2**

**ದಿನಾಂಕ: 05-03-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲು ಪ್ರತಿವಾದಿಯ ಪರ: ಶ್ರೀ. ಎಸ್, ಎಮ್. ವಕೀಲರಿಂದಃ</u>**

1. ಸದರಿ ನರೇಂದ್ರ ಇವರು ಗೌರಮ್ಮ ಇವರ ಮಕ್ಕಳ ವಿರುದ್ಧ ದಾವೆಯನ್ನು ಸಲ್ಲಿಸಿರುತ್ತಾರೆ ಗೌರಮ್ಮ ಇವರ ಮಕ್ಕಳ ಹೆಸರು ನನಗೆ ಗೊತ್ತಿಲ್ಲ. ಅನ್ನಪೂರ್ಣ ಇವರ ಮಕ್ಕಳ ಹೆಸರು ಸಿದ್ಧಾರ್ಥ ಮತ್ತು ನರೇಂದ್ರ. ಸದರಿ ಜಮೀನ ಸರ್ವೆ ನಂಬರ 400 ರಲ್ಲಿ ಪ್ರತಿವಾದಿಯರು ಹಸ್ತಕ್ಷೇಪ ಉಂಟು ಮಾಡಿರುತ್ತಾರೆ ಆದ್ದರಿಂದ ದಾವೆಯನ್ನು ಸಲ್ಲಿಸಿರುತ್ತಾರೆ. ಸರ್ವೆ ನಂಬರ 400 ಇದು ಗೌರಮ್ಮ ಇವರ ಹಿರಿಯರ ಆಸ್ತಿ ಎಂದರೆ ಸರಿ. ಜಮೀನ ಸರ್ವೆ ನಂಬರ 400 ಇದರ ಒಟ್ಟು ಕ್ಷೇತ 18 ಎಕರೆ 18 ಗುಂಟೆ ಇದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಸದರಿ ಜಮೀನ ಸರ್ವೆ ನಂಬರ 400 ಇದು ಭೀಮಪ್ಪ ತಂದೆ ಹಣಮಂತ ಇವರ ಆಸ್ತಿ ಎಂದರೆ ಸರಿ. ಸದರಿ ಭೀಮಪ್ಪ ತಂದೆ ಹಣಮಂತ ಇವರಿಗೆ 2 ಮಕ್ಕಳು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾಗಪ್ಪ ಮತ್ತು ಶಂಕ್ರಪ್ಪ ಇವರು ಮರಣ ಹೊಂದಿದ ನಂತರ ಸದರಿ ಸರ್ವೆ ನಂಬರ 400 ಕ್ಕೆ ಪ್ರತಿವಾದಿಯರು ಮಾಲೀಕರು ಮತ್ತು ಕಬ್ಜೆದಾರರು ಆಗಿರುತ್ತಾರೆ ಎಂದರೆ ಸರಿ. ಸರ್ವೆ ನಂಬರ 400 ಕ್ಕೆ ವಾದಿಯರು ಯಾವುದೇ ಸಂಬಂಧವಿರುವುದಿಲ್ಲ ಎಂದರೆ ಸಾಕ್ಷಿಯು ಅಕ್ಕನಾಗಮ್ಮ ಇವರು ರವಿಶಂಕರ ಇವರ ಕಡೆಯಿಂದ ಖರೀದಿ ಮಾಡಿರುತ್ತಾರೆ ತದ ನಂತರ ಅನ್ನಪೂರ್ಣ ಇವರಿಗೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ಅನ್ನಪೂರ್ಣ ಮತ್ತು ಅಕ್ಕನಾಗಮ್ಮ ಇವರು ಸರ್ವೆ ನಂಬರ 400 ರಲ್ಲಿ ಖರೀದಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂಬರ 400 ಖರೀದಿ ಮಾಡಿದ್ದನ್ನು ತೋರಿಸಲು ದಾಖಲಾತಿಗಳನ್ನು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿಯು ನಮ್ಮ ವಕೀಲರಿಗೆ ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಸರ್ವೆ ನಂಬರ 400 ರಲ್ಲಿ ಅಕ್ಕನಾಗಮ್ಮ ಇವರು ರವಿಶಂಕರ ಇವರ

ಕಡೆಯಿಂದ ಖರೀದಿ ಮಾಡಿರುತ್ತಾರೆ. ಸದರಿ ರವಿಶಂಕರ ಇವರು ಸರ್ವೆ ನಂಬರ 400 ಕ್ಕೆ ಮಾಲೀಕ ಮತ್ತು ಕಬ್ಜೆದಾರ ಇರಲು ದಾಖಲಾತಿಗಳು ನಮ್ಮ ನ್ಯಾಯವಾದಿಗೆ ಮಾಹಿತಿ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಸರ್ವೆ ನಂಬರ 400 ಕ್ಕೆ ರವಿಶಂಕರ ಮಾಲೀಕ ಮತ್ತು ಕಬ್ಜೆದಾರ ಇದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂಬರ 400 ಕ್ಕೆ ರವಿಶಂಕರ ಇವರು ಅಕ್ಕನಾಗಮ್ಮ ಇವರಿಗೆ ಮಾರಾಟ ಮಾಡಿದ ದಾಖಲಾತಿಗಳನ್ನು ನಾನು ನಮ್ಮ ನ್ಯಾಯವಾದಿಗೆ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಅಕ್ಕನಾಗಮ್ಮ ಖರೀದಿ ಮಾಡಿದ ಆಸ್ತಿಯ ನೊಂದಾಯಿತ ದಾಖಲಾತಿ ಇರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ನೊಂದಣಿ ದಾಖಲಾತಿ ಇಲ್ಲದೆ ಇರುವುದರಿಂದ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಅಕ್ಕನಾಗಮ್ಮ ಇವರಿಗೆ ಮಕ್ಕಳು ಇಲ್ಲದೆ ಇರುವ ಕಾರಣ ಮರಣ ಶಾಸನದ ಮೂಲಕ ಅನ್ನಪೂರ್ಣ ಇವಳಿಗೆ ಬಂದಿರುತ್ತದೆ. ಸದರಿ ಮರಣ ಶಾಸನವನ್ನು ನಾನು ನ್ಯಾಯವಾದಿಗೆ ಕೊಟ್ಟಿರುತ್ತೇನೆ. ಸದರಿ ಮರಣಶಾಸನ ಪತ್ರ ಇಲ್ಲದೆ ಇರುವುದರಿಂದ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಮರಣಶಾಸನ ಇದ್ದರೆ ನ್ಯಾಯಾಲಯಕ್ಕೆ ಹಾಜರುಪಡಿಸುತ್ತಿದ್ದೀರಿ ಆದರೆ ಇಲ್ಲದೆ ಇರುವುದರಿಂದ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಮರಣ ಶಾಸನ ಪ್ರಮಾಣ ಪತ್ರಕ್ಕೆ ನ್ಯಾಯಾಲಯದ ಕಡೆಯಿಂದ ಪ್ರೊಬೈಟ ಮಾಡಿರುವುದಿಲ್ಲ ಎಂದರೆ ನನಗೆ ಮಾಹಿತಿ ಇಲ್ಲ. ಮರಣಶಾಸನದ ಪ್ರಕಾರ ಅನ್ನಪೂರ್ಣ ಇವಳಿಗೆ ಮುಟೇಷನ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮುಟೇಷನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ನ್ಯಾಯವಾದಿಗೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಮುಟೇಷನ ಮತ್ತು ಪ್ರೊಬೈಟ ಆಗಿರುವುದಿಲ್ಲ, ಮರಣಶಾಸನ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಅನ್ನಪೂರ್ಣ ಇವರು ವಾದಿಯರಿಗೆ ದಾನ ಪತ್ರ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾನ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ನ್ಯಾಯವಾದಿಗೆ ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ.

2. ದಾವಾ ಆಸ್ತಿಯ ಚಕಬಂದಿ ಪೂರ್ವಕ್ಕೆ ಚಿತ್ತಾಪೂರ ರಸ್ತೆ, ಪಶ್ಚಿಮಕ್ಕೆ ರೈಲ್ವೆ ಹಳಿ, ದಕ್ಷಿಣಕ್ಕೆ ಸರ್ವೆ ನಂಬರ 401 ಬರುತ್ತದೆ, ಉತ್ತರಕ್ಕೆ ಆರ್.ಟಿ.ಓ ಆಫೀಸ ಬರುತ್ತದೆ. ಸದರಿ ಈ ಮೇಲಿನ ಚಕಬಂದಿ ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ಸದರಿ ಜಮೀನ ಸರ್ವೆ ನಂಬರ 398, 399 ಮತ್ತು 400 ರಲ್ಲಿ ದಾವಾ ಆಸ್ತಿಯ ಎಷ್ಟು ವಿಸ್ತೀರ್ಣ ಬಂದಿರುತ್ತದೆ ಎಂದರೆ ನನಗೆ ಹೇಳಲು ಬರುವುದಿಲ್ಲ. ಸದರಿ ದಾವಾ ಆಸ್ತಿಯು ಜಮೀನ ಸರ್ವೆ ನಂಬರ 400 ರಲ್ಲಿ ಬರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜಮೀನ ಸರ್ವೆ ನಂಬರ 400 ಮತ್ತು ದಾವಾ ಅಸ್ತಿಗೆ ಯಾವುದೇ ಸಂಬಂಧವಿರುವುದಿಲ್ಲ ಎಂದರೆ ಸರಿಯಲ್ಲ. ಜಮೀನ ಸರ್ವೆ ನಂಬರ 400 ರಲ್ಲಿ ಪ್ರತಿವಾದಿಯರು ಹಸ್ತಕ್ಷೇಪ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ ದಾವಾ ಆಸ್ತಿಯು ಜಮೀನ ಸರ್ವೆ ನಂಬರ 400 ರಲ್ಲಿ ಬರದೆ ಇದ್ದರೂ ಕೂಡ ಬರುತ್ತದೆ ಎಂದು ಪ್ರತಿವಾದಿಯರಿಗೆ ತೊಂದರೆ ನೀಡಿರುತ್ತೇವೆ ಎಂದರೆ ಸರಿಯಲ್ಲ.

3. ನನ್ನ ಊರು ಭೀರನಾಳ ಸರ್ವೆ ನಂಬರ 400 ಇದು ಯಾದಗಿರಿ ಬಿ.ಗ್ರಾಮದಲ್ಲಿ ಇದೆ. ನಾನು ಭೀರನಾಳ ಗ್ರಾಮದವನು ಆಗಿದ್ದರಿಂದ ಜಮೀನ ಸರ್ವೆ ನಂಬರ 400 ಬಗ್ಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಾವಾ ಆಸ್ತಿಯು ಜಮೀನ ಸರ್ವೆ ನಂಬರ 400 ರಲ್ಲಿ ಎಷ್ಟು ಬರುತ್ತದೆ ಎಂದು ತೋರಿಸಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಯು ಅಸ್ತಿತ್ವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ವಿಷಯ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>**ಮರು ವಿಚಾರಣೆ ಇಲ್ಲ.**</u>

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ**